ಪಾಠ–7 ಫೆಬ್ರವರಿ 8–14

# ಸಿಂಹಗಳ ಗವಿಯಿಂದ ದೇವದೂತರ ಗವಿಗೆ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ದಾನಿಯೇಲ 6:1 ಮತ್ತು ಸಮುವೇಲ 18:6–9, ಮತ್ತಾಯ 6:6, ಅ.ಕೃ 5:27–32, ಮಾರ್ಕ 6:14–29, ಇಬ್ರಿಯ 11:35–38.

**ಸ್ಮರಣವಾಕ್ಯ : "ಹೀಗಿರಲು ಮುಖ್ಯಾಧಿಕಾರಿಗಳೂ ದೇಶಾಧಿಪತಿಗಳೂ ರಾಜ್ಯಭಾರದ ವಿಷಯವಾಗಿ ದಾನಿಯೇಲನ ಮೇಲೆ ತಪ್ಪು ಹೊರಿಸುವುದಕ್ಕೆ ಸಂದರ್ಭ ಹುಡುಕುತ್ತಿದ್ದರು; ಆದರೆ ತಪ್ಪು ಹೊಂದಿಸುವ ಯಾವ ಸಂದರ್ಭವನ್ನೂ ಯಾವ ತಪ್ಪೂ ಕಾಣಲಾರದೆ ಹೋದರು" (ದಾನಿಯೇಲ 6:4).**

ಯೇದ್ಯ ಪಾರಸಿಯರು ಬ್ಯಾಬಿಲೋನಿನ ರಾಜ್ಯಭಾರ ವಹಿಸಿಕೊಂಡ ಮೇಲೆ ಮೇದ್ಯನಾದ ದಾರ್ಯವೆಷನು ದಾನಿಯೇಲನ ಜ್ಞಾನವನ್ನು ಗುರುತಿಸಿ ಅವನನ್ನು ಹೊಸ ಸರ್ಕಾರದ ಭಾಗವಾಗಿರುವುದಕ್ಕೆ ಆಹ್ವಾನಿಸಿದನು. ದಾನಿಯೇಲನಿಗೆ ವಯಸ್ಸಾಗಿದ್ದರೂ ಸಾರ್ವಜನಿಕ ಕರ್ತವ್ಯಗಳನ್ನು ನಿರ್ವಹಿಸಿರುವುದರಲ್ಲಿ ಆತನು ಸಮರ್ಥನಾಗಿದ್ದರಿಂದ ಇಡೀ ಮೇದ್ಯಪಾರಸಿಯ ಸರ್ಕಾರದ ಮುಖ್ಯ ಆಡಳಿತಾಧಿಕಾರಿಯನ್ನಾಗಿ ನೇಮಿಸಿದನು.

ಏನೇ ಆಗಲಿ, ಈ ಅಧ್ಯಾಯವು ತೆರೆದುಕೊಳ್ಳುತ್ತಿದ್ದಂತೆಯೇ ದಾನಿಯೇಲನು ಮೊದಲ ಪಾಪವೆಂದು ತಕ್ಕ ರೀತಿಯಲ್ಲಿ ಕರೆಯಲ್ಪಡುವ ಹೊಟ್ಟೆಕಿಚ್ಚಿನ ಫಲಿತಾಂಶವನ್ನು ಎದುರಿಸಬೇಕಾಯಿತು. ಈ ಕಥೆಯು 'ಮುಕ್ತಾಯ

ಆಗುವುದರೊಳಗೆ ದಾನಿಯೇಲನು ಕರ್ತವ್ಯಗಳಿಗೆ ಮಾತ್ರವಲ್ಲದೆ ಬಹಳ ಮುಖ್ಯವಾಗಿ ದೇವರಿಗೂ ನಂಬಿಗಸ್ತನಾಗಿದ್ದನು. ದೇವರಿಗೆ ನಂಬಿಗಸ್ತನಾಗಿದ್ದದು ಇನ್ನಿತರ ವಿಷಯಗಳ ನಂಬಿಗಸ್ತನಾಗುವುದರ ಮೇಲೆಯೂ ನೇರವಾದ ಪರಿಣಾಮ ಬೀರಿತ್ತು. ದಾನಿಯೇಲನ ಹಿಂಸೆಗೊಳಗಾದ ಅನುಭವವು ಅಂತ್ಯಕಾಲದಲ್ಲಿರುವ ದೇವಜನರಿಗೆ ಒಂದು ನಿದರ್ಶನವಾಗಿರುತ್ತದೆ. ದೇವಜನರು ಶೋಧನೆಗಳಿಂದ, ಕಷ್ಟಸಂಕಟಗಳಿಂದ ಮುಕ್ತರಾಗಿರುತ್ತಾರೆಂದು ಅರ್ಥಕೊಡುವುದಿಲ್ಲ. ಒಳ್ಳೆಯದು ಕೆಟ್ಟದರ ಜೊತೆ ನಡೆಸುವ ಸಂಘರ್ಷದಲ್ಲಿ ಕಡೆಯದಾಗಿ ಗೆಲ್ಲುತ್ತದೆ ಮತ್ತು ದೇವರು ಅಂತ್ಯದಲ್ಲಿ ತನ್ನ ಜನರನ್ನು ದೋಷಮುಕ್ತ ಮಾಡುತ್ತಾನೆಂಬುದನ್ನು ಖಾತ್ರಿ ಪಡಿಸುತ್ತದೆ.

ಫೆಬ್ರವರಿ 15ರ ಸಬ್ಬತ್ತಿಗೆ ಈ ಪಾಠವನ್ನು ಸಿದ್ಧಪಡಿಸಲಾಗಿದೆ.

**ಭಾನುವಾರ** **ಫೆಬ್ರವರಿ 9**

## ಅಸೂಯೆ ಪಡುವ ಆತ್ಮಗಳು (ವ್ಯಕ್ತಿಗಳು)

ಪರಿಪೂರ್ಣವಾದ ವಾತಾವರಣವಿದ್ದ ಪರಲೋಕದಲ್ಲಿ ಲೂಸಿಫರನು ಕ್ರಿಸ್ತನ ಮೇಲೆ ಅಸೂಯೆ ಪಟ್ಟನು. "ಲೂಸಿಫರನು ಯೇಸುಕ್ರಿಸ್ತನ ಮೇಲೆ ಮತ್ಸರ ಮತ್ತು ಅಸೂಯೆ ಉಳ್ಳವನಾಗಿದ್ದನು. ಎಲ್ಲಾ ದೂತರು ಯೇಸುಕ್ರಿಸ್ತನ ಅಧಿಕಾರವನ್ನು ಒಪ್ಪಿ ಅವನಿಗೆ ಅಡ್ಡ ಬೀಳುತ್ತಿದ್ದರು. ಹಾಗೆಯೇ ಲೂಸಿಫರನು ಅಡ್ಡಬೀಳುತ್ತಿದ್ದರೂ ತನ್ನ ಹೃದಯದಲ್ಲಿ ಮತ್ಸರ ಮತ್ತು ದ್ವೇಷವನ್ನು ತುಂಬಿಕೊಂಡಿದ್ದನು". ಎಲೆನ್ ಜಿ ವೈಟಮ್ಮನವರ "ವಿಮೋಚನೆಯ ಕಥೆ" ಪುಸ್ತಕದ 14ನೇ ಪುಟ.

ಮತ್ಸರದ ಭಾವವು ಬಹಳ ಅಪಾಯಕರವಾದುದು, ಹತ್ತುಕಟ್ಟಳೆಗಳಲ್ಲಿ ನರಹತ್ಯ ಕಳ್ಳತನಗಳನ್ನು ನಿಷೇಧಿಸುವುದರ ಜೊತೆಗೆ ಆಶಿಸುವುದರ ವಿರುದ್ಧವಾಗಿಯೂ ಒಂದು ಕಟ್ಟಳೆಯಿದೆ– (ವಿ.ಕಾಂಡ 20:17).

ಓದಿರಿ : ದಾನಿಯೇಲ 6:1–5ಗಳನ್ನು ಆ.ಕಾಂಡ 37:11 ಮತ್ತು 1 ಸಮುವೇಲ 18:6–9 ವಾಕ್ಯಗಳ ಜೊತೆಗೆ ಓದಿರಿ. ಈ ಎಲ್ಲಾ ಕಡೆಗಳಲ್ಲಿಯೂ ಮತ್ಸರವು ಯಾವ ಪಾತ್ರವನ್ನು ವಹಿಸುತ್ತದೆ?

ದಾನಿಯೇಲನ ಆಡಳಿತ ಸಾಮರ್ಥ್ಯವು ರಾಜನ ಮೆಚ್ಚಿಗೆಯನ್ನು ಪಡೆಯಿತು. ಆದರೆ ಬೇರೆ ಅಧಿಕಾರಿಗಳು ಹೊಟ್ಟೆಕಿಚ್ಚು ಪಡುವಂತೆ ಮಾಡಿತು. ಹಾಗಾಗಿ ಆತನನ್ನು ಭ್ರಷ್ಟತೆಯ ಆರೋಪದ ಮೇಲೆ ಅಧಿಕಾರದಿಂದ ತೆಗೆಸುವುದಕ್ಕೆ ಪಿತೂರಿ ಹೂಡಿದರು. ಆದರೆ ಅವರು ಅವನ ಆಡಳಿತದಲ್ಲಿ ಎಷ್ಟೇ ಹುಡುಕಿದರೂ ತಪ್ಪು ಸಿಗಲಿಲ್ಲ. ಹೀಗಿರಲು ಮುಖ್ಯಾಧಿಕಾರಿಗಳೂ ದೇಶಾಧಿಪತಿಗಳೂ ರಾಜ್ಯಭಾರದ ವಿಷಯವಾಗಿ ದಾನಿಯೇಲನ ಮೇಲೆ ತಪ್ಪು ಹೊರಿಸುವುದಕ್ಕೆ ಸಂದರ್ಭ ಹುಡುಕುತ್ತಿದ್ದರು; ಆದರೆ ತಪ್ಪು ಹೊರಿಸುವ ಯಾವ ಸಂದರ್ಭವನ್ನೂ ಯಾವ ತಪ್ಪನ್ನು ಕಾಣಲಾರದೆ ಹೋದರು; ಅವನು ನಂಬಿಗಸ್ತನೇ ಆಗಿದ್ದನು. ಅವನಲ್ಲಿ ಆಲಸ್ಯವಾಗಲಿ, ಅಕ್ರಮವಾಗಲಿ ಸಿಕ್ಕಲಿಲ್ಲ (ದಾನಿ 6:4). 'ನಂಬಿಗಸ್ತ' ಎಂಬ ಅರ್ಯಾಮಿಕ ಭಾಷೆಯ ಪದವನ್ನು 'ನಂಬಲರ್ಹ' ಎಂಬುದಾಗಿಯೂ ಅನುವಾದಿಸಬಹುದು.

ದಾನಿಯೇಲನು ದೋಷರಹಿತನಾಗಿದ್ದನು, ಅಧಿಕಾರಿಗಳು ಅವನ ಮೇಲೆ ಯಾವುದೇ ಆರೋಪವನ್ನು ಹೊರಿಸಲಾರದೆ ಹೋದರು. ದಾನಿಯೇಲನು ದೇವರಿಗೆ ಹೇಗೆ ನಂಬಿಗಸ್ತನಾಗಿದ್ದನು ಮತ್ತು ದೇವರ ಆಜ್ಞೆಗಳಿಗೆ ಹೇಗೆ ವಿಧೇಯನಾಗಿದ್ದನೆಂಬುದನ್ನು ಸಹಾ ಅಧಿಕಾರಿಗಳು ಗ್ರಹಿಸಿಕೊಂಡಿದ್ದರು. ಆದುದರಿಂದ ಅವರು ದಾನಿಯೇಲನನ್ನು ರಾಜನಿಗೆ ವಿಧೇಯನಾಗಬೇಕು ಇಲ್ಲವೇ ದೇವರಿಗೆ ವಿಧೇಯನಾಗಬೇಕು ಎನ್ನುವ ಸಂದಿಗ್ಧ ಪರಿಸ್ಥಿತಿಗೆ ಅವನನ್ನು ಸಿಲುಕಿಸಲು ಸನ್ನಿವೇಶವನ್ನು ಸೃಷ್ಟಿಸಬೇಕಾಗಿತ್ತು ಸರಿಯಾದ ಪರಿಸ್ಥಿತಿಯಲ್ಲಿ ದಾನಿಯೇಲನು ರಾಜನ ಶಾಸನಗಳಿಗಿಂತ ದೇವರ ಕಟ್ಟಳೆಗಳ ಪರವಾಗಿರುತ್ತಾನೆಂದು ದಾನಿಯೇಲನ ವಿಷಯದಲ್ಲಿ ಮನಗಂಡರು ದಾನಿಯೇಲನ ನಂಬಿಗಸ್ತಿಕೆಗೆ ಇದು ಎಂಥಾ ಸಾಕ್ಷಿ ಕೊಡುತ್ತದೆಯಲ್ಲವೇ!

ಹೊಟ್ಟೆಕಿಚ್ಚಿನ ವಿಷಯದಲ್ಲಿ ಯಾವ ತರದ ಹೋರಾಟವನ್ನು ಮಾಡುತ್ತಿರುವಿರಿ, ಅಂಥವರೊಂದಿಗೆ ಹೇಗೆ ವ್ಯವಹರಿಸುವಿರಿ? ಹೊಟ್ಟೆಕಿಚ್ಚು ಯಾಕೆ ಭಯಂಕರವಾದ ಆತ್ಮೀಕ ಪ್ರಮಾದವಾಗಿದೆ?

**ಸೋಮವಾರ** **ಫೆಬ್ರವರಿ 10**

## ದಾನಿಯೇಲನ ವಿರುದ್ಧವಾಗಿ ಮಾಡಿದ ಪಿತೂರಿ

ಓದಿರಿ: ದಾನಿಯೇಲ 6:6–9 ಈ ರಾಜಾಜ್ಞೆಯ ಹಿಂದಿರುವ ಆಲೋಚನೆ ಏನು? ರಾಜನ ಗರ್ವದ ಮೇಲೆ ಯಾವ ಪಾತ್ರವನ್ನು ವಹಿಸುತ್ತದೆ?

ದಾರ್ಯವೆಷನು ತಾನು ಹೊರಡಿಸಿದ ಆದೇಶವನ್ನು ತಾನೇ ಕೂಡಲೇ ರದ್ದು ಮಾಡಲು ಬಯಸಿದ ಕಾರಣದಿಂದ ಕ್ಷುಲ್ಲಕನಾಗಿ ಕಾಣಿಸಬಹುದು. ಆಗತಾನೆ ಅಸ್ತಿತ್ವಕ್ಕೆ ಬಂದ ರಾಜ್ಯದ ರಾಜಕೀಯ ಪರಿಸ್ಥಿತಿಯೊಂದಿಗೆ ಆಟವಾಡುವ ಸಾಕಷ್ಟು ಬುದ್ಧಿವಂತರಾಗಿದ್ದ ಅಧಿಕಾರಿಗಳು ಹಾಕಿದ ಬಲೆಗೆ ರಾಜನು ಸಿಕ್ಕಿಬಿದ್ದನು. ಆಡಳಿತವು ಹೆಚ್ಚು ದಕ್ಷತೆಯುಳ್ಳದ್ದಾಗ ಮಾಡಲು ಬಯಸಿದ ದಾರ್ಯವೆಷನು ಸರ್ಕಾರಕ್ಕೆ 20 ದೇಶಾಧಿಪತಿಗಳನ್ನು ನೇಮಿಸಿ ಅಧಿಕಾರವನ್ನು ವಿಕೇಂದ್ರಿಕರಣ ಮಾಡಿದನು. ಅಂತಹ ಕ್ರಮಗಳು ದೀರ್ಘಾವಧಿಯಲ್ಲಿ ಅಪಾಯವನ್ನು ಒಳಗೊಂಡಿರುತ್ತವೆ. ಒಬ್ಬ ಪ್ರಭಾವಯುಕ್ತ ದೇಶಾಧಿಪತಿಯು ಬಹಳ ಸುಲಭವಾಗಿ ರಾಜನ ಮೇಲೆ ಎದುರುಬಿದ್ದು ರಾಜ್ಯವನ್ನು ಇಬ್ಭಾಗ ಮಾಡಬಹುದಾಗಿತ್ತು. ಹಾಗಾಗಿ 30 ದಿನಗಳ ಕಾಲ ಎಲ್ಲರೂ ರಾಜನಿಗೆ ಮಾತ್ರ ಅಡ್ಡ ಬೀಳಕೆಂಬ ಆದೇಶದಿಂದ ಪ್ರಜೆಗಳನ್ನು ರಾಜನಿಗೆ ಹೆಚ್ಚು ನಿಷ್ಠರನ್ನಾಗಿಸಲು, ಯಾವುದೇ ವಿದ್ರೋಹವನ್ನು ತಡೆಯಲು ಇದು ಒಂದು ಒಳ್ಳೆಯ ಕಾರ್ಯತಂತ್ರವಾಗಿತ್ತು. ಅಂತಹ ಪ್ರಸ್ತಾವನೆಗೆ ಎಲ್ಲಾ ದೇಶಾಧಿಪತಿಗಳ ಆಡಳಿತಗಾರರ ಮತ್ತು ಪ್ರಾಂತ್ಯಾಧಿಕಾರಿಗಳ, ಸಲಹೆಗಾರರ ಸಮ್ಮತಿಯಿದೆಯೆಂಬುದಾಗಿ ರಾಜನನ್ನು ತಪ್ಪುದಾರಿಗೆ ನಡೆಸಿದರು. ಆದರೆ ಇದಕ್ಕೆ ದಾನಿಯೇಲನನ್ನು ಪರಿಗಣಿಸದೆ ಹೋದುದರಿಂದ ಆದೇಶವು ದೋಷಪೂರಿತವಾಗಿತ್ತು. ಜೊತೆಗೆ ರಾಜನನ್ನೇ ದೇವರಂತೆ ಎಣಿಸಬೇಕೆಂಬ ಪ್ರಸ್ತಾವನೆಯು ರಾಜನ ಮೆಚ್ಚಿಕೆಯಾಗಿತ್ತು.

ಪಾರಸಿಯ ರಾಜರು ತಮ್ಮನ್ನು ದೈವೀಕ ಸ್ಥಾನಕ್ಕೆ ಏರಿಸಿಕೊಂಡುದಕ್ಕೆ ಚರಿತ್ರೆಯಲ್ಲಿ ಯಾವುದೇ ಪುರಾವೆಗಳಿಲ್ಲ. ಆದಾಗ್ಯೂ ಈ ನಿಬಂಧನೆಯು ರಾಜನನ್ನೇ ಮೂವತ್ತು ದಿನಗಳ ಕಾಲ ದೇವರಂತೆ ಪರಿಗಣಿಸಿ ಪ್ರಾರ್ಥನೆಗಳನ್ನು ಅವನ ಮುಖಾಂತರ ದೇವರಿಗೆ ಸಲ್ಲಿಸಬೇಕಾಗಿತ್ತು. ದೌರ್ಭಾಗ್ಯವೇನೆಂದರೆ ರಾಜನು ಈ ಪ್ರಸ್ತಾವನೆಯ ಹಿಂದಿರುವ ಉದ್ದೇಶವನ್ನು ತನಿಖೆ ಮಾಡಲಿಲ್ಲ. ಯಾವ ನಿಬಂಧನೆಯು

ಪಿತೂರಿಯನ್ನು ತಡೆಯುತ್ತದೆಂದು ಭಾವಿಸಲಾಗಿತ್ತೋ ಅದೇ ನಿಬಂಧನೆಯು ದಾನಿಯೇಲನಿಗೆ ವಿರೋಧವಾಗಿ ಮಾಡಿದ ಪಿತೂರಿಯಾಗಿತ್ತು.

ಈ ನಿಬಂಧನೆಯು ಎರಡು ಅಂಶಗಳು ಗಮನಾರ್ಹವಾಗಿವೆ. ಮೊದಲನೆಯದು ಇದನ್ನು ಉಲ್ಲಂಘಿಸಿದವರನ್ನು ಸಿಂಹಗಳ ಗವಿಗೆ ಹಾಕುವ ಶಿಕ್ಷೆ. ಇಂತಹ ಶಿಕ್ಷೆಗೆ ಎಲ್ಲೂ ಸಮ್ಮತಿಯಿರಲಿಲ್ಲವಾದರೂ ಒಂದು ನಿರ್ದಿಷ್ಟವಾದ ಸಂದರ್ಭಕ್ಕೆ ಅಂದರೆ ದಾನಿಯೇಲನ ವಿರೋಧವಾಗಿ ಆತನ ವೈರಿಗಳು ಇದನ್ನು ಜಾರಿಗೆ ತಂದಿದ್ದರು. ಪೂರ್ವದೇಶದ ಪುರಾತನ ರಾಜರುಗಳು ಸಿಂಹಗಳನ್ನು ಪಂಜರಗಳಲ್ಲಿ ಇಟ್ಟಿರುತ್ತಿದ್ದರು, ಅವುಗಳನ್ನು ಕೆಲವು ಸಂದರ್ಭಗಳಲ್ಲಿ ಪಂಜರಕ್ಕೆ ಹೊರಗೆ ಬಿಟ್ಟು ಬೇಟೆಯಾಡಿಸುತ್ತಿದ್ದರು. ರಾಜನ ಆಜ್ಞೆಗಳನ್ನು ಉಲ್ಲಂಘಿಸಿದವರನ್ನು ಸಿಗಿದುಹಾಕುವುದಕ್ಕೆ ಸಿಂಹಗಳ ಸಂಖ್ಯೆ ಕಡಿಮೆ ಇರುತ್ತಿರಲಿಲ್ಲ. ಎರಡನೆಯದು, ರಾಜಾಜ್ಞೆಯನ್ನು ಬದಲಾಯಿಸುವಂತಿರಲಿಲ್ಲ. ಮೇದ್ಯ ಪಾರಸಿಯರ ಆಜ್ಞೆಗಳು ಎಂದಿಗೂ ರದ್ದಾಗದಿರುವ ಗುಣವಿಶೇಷವನ್ನು ಹೊಂದಿದ್ದವು ಎಂಬುದನ್ನು (ಎಸ್ತೇರಳು 1:19) ಮತ್ತು 8:8ರಲ್ಲಿ ನೋಡುತ್ತೇವೆ. ಪುರಾತನ ಕಾಲದ ಗ್ರೀಕ್ ಚರಿತ್ರೆಕಾರನಾದ ಡಿಯೋಡಾರಸ್ ಸಿಕಲಸ್ಸನು 3ನೇ ದಾರ್ಯಸನು (ದಾನಿಯೇಲನ ಪುಸ್ತಕದಲ್ಲಿರುವ ದಾರ್ಯವೇಷನಲ್ಲ) ಒಬ್ಬ ನಿರಪರಾಧಿಗೆ ಮರಣ ಶಿಕ್ಷೆಯನ್ನು ಕೊಟ್ಟ ಮೇಲೆ ತನ್ನ ಮನಸ್ಸನ್ನು ಬದಲಾಯಿಸಿಕೊಂಡು ಶಿಕ್ಷೆಯನ್ನು ರದ್ದು ಪಡಿಸಲಾರದ ಸಂದರ್ಭವನ್ನು ಉಲ್ಲೇಖಿಸಿದ್ದಾನೆ.

**ಮಂಗಳವಾರ** **ಫೆಬ್ರವರಿ 11**

## ದಾನಿಯೇಲನ ಪ್ರಾರ್ಥನೆ

ಆದರೆ ನೀನು ಪ್ರಾರ್ಥನೆ ಮಾಡಬೇಕಾದರೆ ನಿನ್ನ ಏಕಾಂತವಾದ ಕೋಣೆಯೊಳಗೆ ಹೋಗಿ ಬಾಗಿಲನ್ನು ಮುಚ್ಚಿಕೊಂಡು ಅಂತರಂಗದಲ್ಲಿಯೂ ಇರುವ ನಿನ್ನ ತಂದೆಗೆ ಪ್ರಾರ್ಥನೆ ಮಾಡು; ಅಂತರಂಗದಲ್ಲಿ ನಡೆಯುವುದನ್ನು ನೋಡುವ ನಿನ್ನ ತಂದೆಯು ನಿನಗೆ ಫಲಕೊಡುವನು (ಮತ್ತಾಯ 6:6).

ಓದಿರಿ : ದಾನಿಯೇಲ 6:10. ಯಾಕೆ ದಾನಿಯೇಲನು ಯಾರಿಗೂ ಕಾಣಿಸದ ಹಾಗೆ ಪ್ರಾರ್ಥನೆ ಮಾಡಲಿಲ್ಲ?

ದಾನಿಯೇಲನು ಅನುಭವವುಳ್ಳ ಒಬ್ಬ ರಾಜನೀತಜ್ಞನಾಗಿದ್ದನು, ಆದರೆ ಇವೆಲ್ಲಕ್ಕಿಂತಲೂ ಹೆಚ್ಚಾಗಿ ಆತನು ದೇವರ ಸೇವಕನಾಗಿದ್ದನು. ಹಾಗಾಗಿ ರಾಜನ ನಿಬಂಧನೆಯ ಹಿಂದೆ ಏನಿದೆ ಎಂಬುದು ರಾಜ್ಯದ ಆಡಳಿತಗಾರರ ಪೈಕಿ ದಾನಿಯೇಲನೊಬ್ಬನಿಗೆ ಮಾತ್ರ ಗೊತ್ತಿತ್ತು. ಈ ನಿಬಂಧನೆಯ ರಾಜನಾದ ದಾರ್ಯವೆಷನಿಗೆ ತನ್ನ ರಾಜ್ಯದ ಪ್ರಜೆಗಳ ಒಗ್ಗಟ್ಟನ್ನು ಬಲಪಡಿಸುವ ಅವಕಾಶವನ್ನು ಕೊಟ್ಟಿತ್ತು, ಆದರೆ ಪಿತೂರಿಗಾರರಿಗೆ ದಾನಿಯೇಲನನ್ನು ಸರ್ಕಾರದ ಆಡಳಿತದಿಂದ ತೆಗೆದುಹಾಕುವ  ಕಾರ್ಯತಂತ್ರವಾಗಿತ್ತು.

ಹೌದು, ನಿಜವಾದ ಕಾರಣಗಳು ಮತ್ತು ಉದ್ದೇಶಗಳು ದೇವರ ಮತ್ತು ದುಷ್ಟಶಕ್ತಿಗಳ ನಡುವೆ ವಿಶ್ವದಲ್ಲಿ ನಡೆಯುವ ಹೋರಾಟದಲ್ಲಿ ಅಡಗಿವೆ. ಈ ಸಂದರ್ಭದಲ್ಲಿ (ಕ್ರಿ.ಪೂ. 539) ದಾನಿಯೇಲ 7ನೇ ಅಧ್ಯಾಯದಲ್ಲಿರುವ ದರ್ಶನಗಳನ್ನು ಈಗಾಗಲೇ ಪಡೆದುಕೊಂಡಿದ್ದನು (ಕ್ರಿ.ಪೂ. 553) ಮತ್ತು 8ನೇ ಅಧ್ಯಾಯ (ಕ್ರಿ.ಪೂ. 551). ಆದುದರಿಂದ ರಾಜನ ಆಜ್ಞೆಯು ಕೇವಲ ಮಾನವ ರಾಜಕೀಯದ ವಿಷಯವಾಗಿರಲಿಲ್ಲ. ಆದರೆ ಇದು ವಿಶ್ವದ ಹೋರಾಟದ (ಯುದ್ಧದ) ಉದಾಹರಣೆಯಾಗಿದೆ. ಮನುಷ್ಯಕುಮಾರನು ಪರಾತ್ಪರನ ಭಕ್ತರಿಗೆ ರಾಜ್ಯವನ್ನು ಕೊಡುವ ಮತ್ತು ಕನಸಿನ ಅರ್ಥವನ್ನು ಹೇಳಿಕೊಡುತ್ತಿದ್ದ ದೂತನಿಗೆ ಸಹಾಯಕನಾಗಿರುವ ದರ್ಶನಗಳು ದಾನಿಯೇಲನಿಗೆ ಮುಂದೆ ಬರುವ ಬಿಕ್ಕಟ್ಟುಗಳನ್ನು ಎದುರಿಸಲು ಬೇಕಾದ ಧೈರ್ಯ ತಂದುಕೊಟ್ಟವು (ದಾನಿಯೇಲ 7ನೇ ಅಧ್ಯಾಯ) ನೆಬೂಕದ್ನೆಚ್ಚರನು ಆತನ ಸ್ನೇಹಿತರಿಗಾದ ಅನುಭವಗಳನ್ನು ಸಹ ಆಲೋಚಿಸಿದ್ದನು (ದಾನಿಯೇಲ 3ನೇ ಅಧ್ಯಾಯ).

ಆದುದರಿಂದ ದಾನಿಯೇಲನು ತನ್ನ ಭಕ್ತಿಪೂರ್ವಕವಾದ ಅಭ್ಯಾಸಗಳನ್ನು ಬದಲಿಸಲಿಲ್ಲ. ಆದರೆ ದಿನಕ್ಕೆ ಮೂರಾವರ್ತಿ ಯೆರೂಸಲೇಮಿನ ಕಡೆಗೆ ತಿರುಗಿಸಿಕೊಂಡು ಪ್ರಾರ್ಥನೆ ಮಾಡುವ ಪದ್ಧತಿಯನ್ನು ಮುಂದುವರೆಸಿದನು.

ಮೂವತ್ತು ದಿನಗಳ ತನಕ ರಾಜನನ್ನು ಬಿಟ್ಟು ಯಾವ ಮನುಷ್ಯನಿಗಾಗಲಿ ದೇವರಿಗಾಗಲಿ ವಿಜ್ಞಾಪನೆ ಮಾಡಬಾರದೆಂಬ ನಿಷೇಧವಿದ್ದಾಗ್ಯೂ ದಾನಿಯೇಲನು ಯಾವ ಮುನ್ನೆಚ್ಚರಿಕೆಯನ್ನು ತೆಗೆದುಕೊಳ್ಳಲಿಲ್ಲ. ಪ್ರಾರ್ಥನೆ ಮಾಡುವಾಗ

ಅವಿತುಕೊಂಡು ಮರೆಯಾಗಿ ಮಾಡಲಿಲ್ಲ. ರಾಜಾಜ್ಞೆಯನ್ನು ಮೀರುವ ಸಂಘರ್ಷದಲ್ಲಿ ದಾನಿಯೇಲನು ಏಕಾಂಗಿಯಾಗಿದ್ದರಿಂದ ರಾಜ್ಯಾಡಳಿತಗಾರರ ಮಧ್ಯೆ ಅಲ್ಪಸಂಖ್ಯಾತನಾಗಿದ್ದನು. ಅವನು ತನ್ನ ಬಹಿರಂಗ ಪ್ರಾರ್ಥನೆಯ ಮೂಲಕ ರಾಜನ ಮೇಲಿರುವ ನಿಷ್ಠೆಗಿಂತ ತನ್ನ ದೇವರ ಮೇಲಿರುವ ನಿಷ್ಠೆಯೇ ಮುಖ್ಯವಾದುದೆಂದು ತನ್ನ ಜೀವಿತದಲ್ಲಿ ತೋರಿಸಿದನು.

ಅ.ಕೃ. 5:27–32ನ್ನು ಓದಿರಿ. ಅಪೋಸ್ತಲರಿಗೆ ಖಂಡಿತವಾದ ಎಚ್ಚರಿಕೆ ಕೊಟ್ಟಿದ್ದರೂ ನಾವು ಮನುಷ್ಯರ ಆಜ್ಞೆಗಳಿಗೆ ವಿರೋಧವಾಗಿರುವಾಗ ದೇವರ ಚಿತ್ತಕ್ಕೆ ಅನುಗುಣವಾಗಿ ನಡೆಯುತ್ತಿದ್ದೇವೆಯೆಂಬ ಖಾತ್ರಿ ಇರಬೇಕು ಏಕೆ? ನಾವು ಯಾವ ನಂಬಿಕೆಗಳು ಅಥವಾ ನಂಬಿಕೆಯ ವ್ಯವಸ್ಥೆಯು ತಪ್ಪಾದೆಂದು ನೆನಸುತ್ತೇವೆಯೋ ಅಂಥವುಗಳನ್ನು ಮೀರುವುದಕ್ಕಿಂತ ಮರಣವನ್ನೇ ಆಯ್ಕೆ ಮಾಡಿಕೊಂಡ ಜನರ ಬಗ್ಗೆ ಆಲೋಚಿಸಿರಿ.

**ಬುಧವಾರ** **ಫೆಬ್ರವರಿ 12**

## ಸಿಂಹದ ಗವಿಯಲ್ಲಿ

ದಾನಿಯೇಲ 6:11–13ನ್ನು ಓದಿರಿ. ದೇವರಿಗೆ ಎಷ್ಟು ಬಲಯುತವಾದ ಸಾಕ್ಷಿಯಾಗಿದ್ದನು ಎಂಬುದನ್ನು ಪ್ರಕಟಿಸಿದಂಥ ಯಾವುದನ್ನು ರಾಜನು ದಾನಿಯೇಲನಿಗೆ ಹೇಳಿದನು?

ಸಂಚುಗಾರರು ದಾನಿಯೇಲನು ದೇವರಿಗೆ ಪ್ರಾರ್ಥನೆ ಮಾಡುವುದನ್ನು ನೋಡಿದರು, ಅವರು ರಾಜನ ಹತ್ತಿರ ದಾನಿಯೇಲನ ಮೇಲೆ ಆಪಾದನೆ ಮಾಡುತ್ತಾ ಅವನಿಗೆ ಅಪಮಾನವಾಗುವ ಹಾಗೆ ರಾಜನೇ ಯೆಹೂದದಿಂದ ಸೆರೆಯಾಗಿ ತಂದವರಲ್ಲಿ ಒಬ್ಬನಾದ ಆ ದಾನಿಯೇಲನು (ದಾನಿ 6:13) ಎಂಬುದಾಗಿ ಹೇಳುತ್ತಾರೆ. ಅವರ ದೃಷ್ಟಿಯಲ್ಲಿ ರಾಜ್ಯದ ಮುಖ್ಯಾಧಿಕಾರಿಗಳಲ್ಲಿ ಒಬ್ಬನಾದವನು. ರಾಜನ ಮೆಚ್ಚಿಕೆಗೆ ಪಾತ್ರನಾದವನು ಒಬ್ಬ ಸೆರೆಯಾಳಿಗಿಂತ ಹೆಚ್ಚಿನವನಲ್ಲವೆಂದು ಹೇಳುತ್ತಾರೆ. ಇದರ ಜೊತೆಗೆ ನಿನ್ನನ್ನಾಗಲೀ ನಿನ್ನ ಹಸ್ತಾಕ್ಷರದ ನಿಬಂಧನೆಯನ್ನಾಗಲಿ ಲಕ್ಷಕ್ಕೆ ತರುವುದಿಲ್ಲವೆಂದು ಹೇಳುತ್ತಾರೆ. ಈವಾಗ ರಾಜನು ತಾನು ಆ ನಿಬಂಧನೆಗೆ ಸಹಿ ಹಾಕಿದ್ದರಿಂದ ಸಿಕ್ಕಿಹಾಕಿಕೊಂಡದ್ದನ್ನು

ಮನಗಾಣುತ್ತಾನೆ. "ರಾಜನು ಈ ಮಾತುಗಳನ್ನು ಕೇಳಿ ಬಹಳ ವ್ಯಸನಗೊಂಡು ದಾನಿಯೇಲನನ್ನು ತಪ್ಪಿಸಬೇಕೆಂದು ಮನಸ್ಸು ಮಾಡಿ ಇವನನ್ನು ಹೇಗೆ ರಕ್ಷಿಸಲಿ ಎಂದು ಸೂರ್ಯಾಸ್ತಮಾನದ ತನಕ ಪ್ರಯಾಸ ಪಟ್ಟನು" ಎಂಬುದಾಗಿ ವಾಕ್ಯವು ಹೇಳುತ್ತದೆ (ದಾನಿ 6:14). ಆದರೆ ರಾಜನು ದಾನಿಯೇಲನನ್ನು ನೇಮಿತ ಶಿಕ್ಷೆಯಿಂದ ಬಿಡಿಸಲು ಏನೂ ಮಾಡಲಾರದವನಾದನು. ಎಂದಿಗೂ ರದ್ದಾಗದ ಮೇದ್ಯ ಪಾರಸಿಯ ನಿಯಮವು ಅಕ್ಷರಶಃ ಅನ್ವಯವಾಗಬೇಕು. ಹಾಗಾಗಿ ರಾಜನು ಒಲ್ಲದ ಮನಸ್ಸಿನಿಂದ ದಾನಿಯೇಲನನ್ನು ಸಿಂಹಗಳ ಗವಿಗೆ ಹಾಕಲು ಅಪ್ಪಣೆ ಕೊಡುತ್ತಾನೆ. ಆದರೆ ಹಾಗೆ ಮಾಡುವಾಗ ದಾರ್ಯವೇಷನು ಒಂದು ನಿರೀಕ್ಷೆಯನ್ನು ವ್ಯಕ್ತಪಡಿಸುತ್ತಾ "ನೀನು ನಿತ್ಯವೂ ಭಜಿಸುವ ದೇವರು ನಿನ್ನನ್ನು ಉದ್ಧರಿಸಲಿ ಎಂದು ಹರಸಿದನು" (ದಾನಿ 6:16).

ದಾನಿಯೇಲನು ಸಿಂಹಗಳ ಮಧ್ಯದಲ್ಲಿ ಏನು ಮಾಡಿದನೆಂದು ಸತ್ಯವೇದದ ವಚನಗಳು ತಿಳಿಸುವುದಿಲ್ಲ, ಆದರೆ ಆತನು ಸಿಂಹಗಳ ಗವಿಯಲ್ಲಿ ದೇವರಿಗೆ ಪ್ರಾರ್ಥಿಸುತ್ತಿದ್ದನೆಂದು ಊಹಿಸಿಕೊಳ್ಳಬಹುದು. ದೇವರು ತನ್ನ ದೂತರನ್ನು ಕಳುಹಿಸಿ ದಾನಿಯೆಲನ ನಂಬಿಕೆಯನ್ನು ಮಾನ್ಯ ಮಾಡಿದನು. ಮುಂಜಾನೆಯಲ್ಲಿ ದಾನಿಯೇಲನಿಗೆ ಯಾವ ಹಾನಿಯೂ ಆಗಿರಲಿಲ್ಲವಾದ್ದರಿಂದ ಸರ್ಕಾರದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಸಿದ್ಧವಾಗಿದ್ದನು. ಇದನ್ನು ಕುರಿತು ಎಲೆನ್ ಜಿ ವೈಟಮ್ಮನವರು ಹೀಗೆ ಹೇಳುತ್ತಾರೆ. ದಾನಿಯೇಲನ ವೈರಿಗಳು ದಾನಿಯೇಲನನ್ನು ಸಿಂಹಗಳ ಗವಿಗೆ ಹಾಕದಂತೆ ದೇವರು ತಡೆಯಲಿಲ್ಲ. ದುಷ್ಟದೂತರು ಮತ್ತು ದುಷ್ಟಮನುಷ್ಯರು ತಮ್ಮ ಉದ್ದೇಶಗಳನ್ನು ಬಹಳ ದೂರದವರೆಗೆ ನೆರವೇರಿಸಲು ಬಿಟ್ಟನು; ಆದರೆ ಆತನು ತನ್ನ ಸೇವಕನಿಗೆ ವಿಶೇಷವಾದ ರೀತಿಯಲ್ಲಿ ಬಿಡುಗಡೆ ಮಾಡಿದನು ಮತ್ತು ಸತ್ಯದ ಹಾಗೂ ನೀತಿಯ ವೈರಿಗಳನ್ನು ಪೂರ್ಣವಾಗಿ ಸೋಲಿಸಿದನು. ಪ್ರವಾದಿಗಳು ಮತ್ತು ರಾಜರು ಎಂಬ ಪುಸ್ತಕದಲ್ಲಿ ಪುಟ 543, 544.

ಈ ಕಥೆಯ ಅಂತ್ಯವು ಸಂತೋಷಕರವಾದಾಗ್ಯೂ ಸತ್ಯವೇದದಲ್ಲಿರುವ ಇನ್ನಿತರ ಸಂದರ್ಭಗಳ ಬಗ್ಗೆ ಏನು ಹೇಳಬಹುದು (ಉದಾ ಮಾರ್ಕ 6:14–29) ಇಲ್ಲಿ

ಅಂತ್ಯದಲ್ಲಿ ಬಿಡುಗಡೆಯಾಗುವುದಿಲ್ಲ. ಇವುಗಳನ್ನು ನಾವು ಹೇಗೆ ಅರ್ಥ ಮಾಡಿಕೊಳ್ಳಬಹುದು?

**ಗುರುವಾರ** **ಫೆಬ್ರವರಿ 13**

## ಸತ್ಯಸಮರ್ಥನೆ

ದಾನಿಯೇಲ 6:24–28ನ್ನು ಓದಿರಿ. ದೇವರ ಬಗ್ಗೆ ದೇವರು ಎಂತಹ ಸಾಕ್ಷಿ ಕೊಡುತ್ತಾನೆ?

ಅರಸನಾದ ದಾರ್ಯವೆಷನು ದೇವರನ್ನು ಸ್ತುತಿಸಿ ಆತನ ಸಾರ್ವಭೌಮತ್ವವನ್ನು ಗುರುತಿಸುವುದೆಂಬ ಸಂಗತಿಯು ಕಥನದ ಮುಖ್ಯಾಂಶವಾಗಿದೆ. ಹಿಂದಿನ ಅಧ್ಯಾಯಗಳಲ್ಲಿ ನೆಬೂಕದ್ನೆಚ್ಚರನು ದೇವರನ್ನು ಸ್ತುತಿಸುವ ಅಥವಾ ದೇವರನ್ನು ಗುರುತಿಸಿದ ಮೇಲೆ ಏನನ್ನು ವ್ಯಕ್ತಪಡಿಸಿದನೆಂಬುದನ್ನು ವಾಕ್ಯಗಳಲ್ಲಿ ಕಾಣಬಹುದು. ದಾನಿ 2:20–23; 3:28,29; ದಾನಿ 4:1–3, 34–37). ನೆಬೂಕದ್ನೆಚ್ಚರನ ಹಾಗೆಯೇ ದಾರ್ಯವೆಷನು ದಾನಿಯೇಲನ ಬಿಡುಗಡೆಯಾದಾಗ ದೇವರನ್ನು ಕೊಂಡಾಡುತ್ತಾನೆ. ಅದಕ್ಕಿಂತಲೂ ಹೆಚ್ಚಾಗಿ ತಾನು ಹೊರಡಿಸಿದ ನಿಬಂಧನೆಗೆ ವ್ಯತಿರಿಕ್ತವಾದ ನಿಬಂಧನೆಯನ್ನು ಹೊರಡಿಸುತ್ತಾನೆ. ನಾನಾಳುವ ರಾಜ್ಯದವರೆಲ್ಲರೂ ದಾನಿಯೇಲನ ದೇವರಿಗೆ ಭಯಭಕ್ತಿಯಿಂದ ನಡೆದುಕೊಳ್ಳಬೇಕೆಂದು ಆಜ್ಞಾಪಿಸುತ್ತೇನೆ (ದಾನಿ 6:26) ಎನ್ನುತ್ತಾನೆ.

ಹೌದು, ದಾನಿಯೇಲನ ಅದ್ಭುತಕರವಾಗಿ ರಕ್ಷಿಸಲ್ಪಟ್ಟನು, ಆತನ ನಂಬಿಗಸ್ತಿಕೆಗೆ ತಕ್ಕ ಪ್ರತಿಫಲ ಸಿಕ್ಕಿತು, ದುಷ್ಟರು ಶಿಕ್ಷಿಸಲ್ಪಟ್ಟರು, ದೇವರ ಘನತೆ ಮತ್ತು ಶಕ್ತಿಯು ಎತ್ತಿ ಹಿಡಿಯಲ್ಪಟ್ಟಿತು. ಇಲ್ಲಿ ನಾವು ಏನನ್ನು ನೋಡುತ್ತೇವೆಯೋ ಅವು ಅಂತ್ಯಕಾಲದಲ್ಲಿ ವಿಶ್ವಮಟ್ಟದಲ್ಲಿ ನಡೆಯುವ ಘಟನೆಗಳಿಗೆ ಸಣ್ಣನಿದರ್ಶನಗಳಾಗಿವೆ.

ದಾನಿಯೇಲ 6:24ನ್ನು ಓದಿರಿ. ಈ ವಚನದಲ್ಲಿ ಕಳವಳಕಾರಿಯಾಗಿರುವ ಯಾವುದನ್ನು ಕಾಣುತ್ತೇವೆ? ಏನೇ ಆಗಲಿ ಇದರಲ್ಲಿ ಒಂದು ಆತಂಕಕಾರಿಯಾದ ಸಮಸ್ಯೆಯಿದೆ ಅದೇನೆಂದರೆ ನಮಗೆ ಗೊತ್ತಿರುವಷ್ಟುಮಟ್ಟಕ್ಕೆ ನಮ್ಮ ಹೆಂಡತಿ ಮಕ್ಕಳು ನಿರಪರಾಧಿಗಳಾದಾಗ್ಯೂ ಅಪರಾಧಿಗಳು ಅನುಭವಿಸುವ ಕಷ್ಟಗಳನ್ನು ಅನುಭವಿಸುತ್ತಾರೆ. ಯಾವುದನ್ನು ನಾವು ಅನ್ಯಾಯವೆಂದು ಅನ್ನುತ್ತೇವೆಯೋ

ಅದನ್ನು ವಿವರಿಸುವುದು ಹೇಗೆ? ಮೊದಲನೆಯದಾಗಿ ಪಾರಸಿಯ ಧರ್ಮಸೂತ್ರದಂತೆ ರಾಜನಿಂದ ಕ್ರಮವು ನಿರ್ಧರಿಸಲ್ಪಟ್ಟ ನಂತರ ಜರುಗಿಸಲ್ಪಟ್ಟಿತು. ಅಪರಾಧಿಯ ಶಿಕ್ಷೆಯ ಜೊತೆಗೆ ಅವನ ನಿರಪರಾಧಿ ಹೆಂಡತಿ ಮಕ್ಕಳೂ ಸಹ ಶಿಕ್ಷೆಗೆ ಒಳಗಾಗುತ್ತಾರೆ. ಒಂದು ಪುರಾತನ ನಿಯಮದ ಪ್ರಕಾರ ಕುಟುಂಬದ ಒಬ್ಬ ಸದಸ್ಯನು ಮಾಡುವ ತಪ್ಪಿಗೆ ಕುಟುಂಬದ ಎಲ್ಲಾ ಸದಸ್ಯರು ಅಪರಾಧದ ಹೊಣೆ ಹೊತ್ತುಕೊಳ್ಳಬೇಕು. ಇದು ಸರಿಯಾದ ಕ್ರಮವೆಂದು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಪಾರಸಿಯ ಧರ್ಮಸೂತ್ರದ ಪ್ರಕಾರ ಮಾತ್ರ ಈ ಕಥೆಯು ಸರಿಯಾಗಿದೆ ಎಂದು ಹೇಳಬಹುದು. ಎರಡನೆಯದಾಗಿ, ಸತ್ಯವೇದವು ಘಟನೆಗಳನ್ನು ಯಥಾವತ್ತಾಗಿ ವಿವರಿಸುತ್ತದೆ. ಆದರೆ ರಾಜನಕ್ರಮವು ಸರಿಯಾಗಿದೆ ಎಂದು ಒಪ್ಪಿಗೆ ನೀಡುವುದಿಲ್ಲ. ಸತ್ಯವೇನೆಂದರೆ ಸತ್ಯವೇದವು ತಂದೆಗಳ ಅಪರಾಧಕ್ಕೆ ಮಕ್ಕಳನ್ನು ಶಿಕ್ಷಿಸಬಾರದೆಂದು ಸ್ಪಷ್ಟವಾಗಿ ಹೇಳುತ್ತದೆ (ಧ.ಕಾಂಡ 24:16).

ಇಂತಹ ಮತ್ತು ಅನೇಕ ಅನ್ಯಾಯಗಳ ನಡೆಯುವಾಗ ಯಾವ ಆದರಣೆಯನ್ನು 1 ಕೊರಿಂಥ 4:5ರಲ್ಲಿ ಹೊಂದಿಕೊಳ್ಳಬಹುದು? ಇದು ಏನನ್ನು ಹೇಳುತ್ತದೆ. ಇದು ಹೇಳುವ ಅಂಶವು ಯಾಕೆ ಪ್ರಾಮುಖ್ಯವಾದುದಾಗಿದೆ?

**ಶುಕ್ರವಾರ** **ಫೆಬ್ರವರಿ 14**

**ಹೆಚ್ಚಿನ ಚಿಂತನೆ** : ಇಬ್ರಿಯರಿಗೆ ಬರೆದ ಪತ್ರಿಕೆಯ ಹನ್ನೊಂದನೆಯ ಅಧ್ಯಾಯದಲ್ಲಿ ದಾನಿಯೇಲನ ಬಿಡುಗಡೆಯು ಸಹಾ ದಾಖಲೆಗೊಂಡಿದೆ. "ನಂಬಿಕೆಗೆ ಹೆಸರಾದವರ ಗುಂಪು" ಎಂದು ಏನು ಕರೆಯಲ್ಪಡುತ್ತದೆಯೋ ಅದು ಹೇಳುವುದೇನೆಂದರೆ ನಂಬಿಕೆಯ ಮೂಲಕ ಅವರು ರಾಜ್ಯಗಳನ್ನು ಸ್ವಾಧೀನ ಮಾಡಿಕೊಂಡರು; ನೀತಿಯನ್ನು ನಡಿಸಿದರು, ವಾಗ್ದಾನಗಳನ್ನು ಪಡಕೊಂಡರು; ಸಿಂಹಗಳ ಬಾಯಿ ಕಟ್ಟಿದರು (ಇಬ್ರಿ 11:33). ಇದು ಬಹಳ ಅದ್ಭುತವಾಗಿದೆ. ದಾನಿಯೇಲನಂತೆ ಮರಣದಿಂದ ಪಾರಾದವರು ಮಾತ್ರ ನಂಬಿಕೆಯ ವೀರರು ಎಂದು ಕರೆಯಲ್ಪಟ್ಟಿಲ್ಲ. ಆದರೆ ಯಾರು ಹಿಂಸೆಗೊಳಪಟ್ಟು ಧೈರ್ಯವಾಗಿ ತಮ್ಮನ್ನು ಮರಣಕ್ಕೆ ಒಪ್ಪಿಸಿಕೊಟ್ಟರೋ ಅವರು ಸಹ ನಂಬಿಕೆಯ ವೀರರಾಗಿದ್ದಾರೆ. ದೇವರು ಕೆಲವರನ್ನು ಜೀವಂತ ಸಾಕ್ಷಿಗಳನ್ನಾಗಿರುವುದಕ್ಕೆ ಮತ್ತೆ ಕೆಲವರನ್ನು ಮರಣದಲ್ಲಿ ಸಾಕ್ಷಿಗಳಾಗಿರುವುದಕ್ಕೆ ಕರೆಯುತ್ತಾನೆ.

ಹಾಗಾಗಿ ದಾನಿಯೇಲನ ಬಿಡುಗಡೆಯ ಕಥನವು ಪ್ರತಿಯೊಬ್ಬರಿಗೂ ಬಿಡುಗಡೆ ಕೊಡಲ್ಪಡುತ್ತದೆ ಎಂಬುದನ್ನು ಸೂಚಿಸುವುದಿಲ್ಲ. ಬದಲಾಗಿ ಅನೇಕ ಪುರುಷರು ಅನೇಕ ಸ್ತ್ರೀಯರು ಯೇಸುಕ್ರಿಸ್ತನ ಮೇಲೆ ಇಟ್ಟ ನಂಬಿಕೆಯ ನಿಮಿತ್ತ ರಕ್ತಸಾಕ್ಷಿಗಳಾಗಿದ್ದಾರೆ. ಆದಾಗ್ಯೂ ದಾನಿಯೇಲನ ಅದ್ಭುತಕರವಾದ ಬಿಡುಗಡೆಯು ದೇವರು ಆಳುತ್ತಾನೆ ಮತ್ತು ಆತನು ಘಟನಾಂತ್ಯದಲ್ಲಿ ತನ್ನ ಮಕ್ಕಳೆಲ್ಲರನ್ನೂ ಪಾಪದ ಮತ್ತು ಮರಣದ ಶಕ್ತಿಯಿಂದ ಬಿಡಿಸುತ್ತಾನೆಂಬುದು ದಾನಿಯೇಲ ಮುಂದಿನ ಅಧ್ಯಾಯಗಳಲ್ಲಿ ಇದು ಸ್ಪಷ್ಟವಾಗುತ್ತದೆ.

## ಚರ್ಚಿಸಬೇಕಾದ ಪ್ರಶ್ನೆಗಳು

1. ಫ್ರೆಂಚರಾದ ಜೀನ್‌ಪಾಲ್ ಸಾರ್‌ಟ್ರೆಯವರು ಒಮ್ಮೆ ಹೀಗೆ ಬರೆದರು. ಮಾನವನ ವಾಸ್ತವಿಕತೆಯ ಮೂಲತತ್ವದ ಯೋಜನೆಯನ್ನು ರೂಪಿಸುವ ಉತ್ತಮ ವಿಧಾನ ಯಾವುದೆಂದರೆ "ಮಾನವನು ಜೀವಿಸುವವನಾಗಿದ್ದು ಅವನ ಯೋಜನೆಯು ದೇವರಂತೆ ಆಗಬೇಕೆಂದು ಬಯಸುವುದು (ಇರುವುದು ಮತ್ತು ಶೂನ್ಯತೆ). ರಾಜನು ಯಾಕೆ ಅವನ ದೇಶಾಧಿಪತಿಗಳು ಹಾಕಿದ ಬಲೆಗೆ ಸಿಕ್ಕಿಕೊಂಡನು ಎಂಬುದನ್ನು ಕನಿಷ್ಠ ಒಂದು ಮಟ್ಟಕ್ಕಾದರೂ ಅರ್ಥ ಮಾಡಿಕೊಳ್ಳಲು ಇದು ಹೇಗೆ ಸಹಾಯ ಮಾಡುತ್ತದೆ? ಇದು ಎಷ್ಟೇ ಗೂಢವಗಿ ಬಂದರು ಇದೇ ತೆರನಾದ ಮನೋಭಾವವು ನಾವು ಜೀವನದ ಯಾವುದೇ ಘಟ್ಟದಲ್ಲಿದ್ದರೂ ಸರಿ ನಮ್ಮಲ್ಲಿ ಉಂಟಾಗದ ಹಾಗೆ ಯಾಕೆ ಎಚ್ಚರ ವಹಿಸಬೇಕು? ನಾವು ದೇವರಂತೆ ಆಗಬೇಕೆಂದು ಆಶಿಸುವ ಇತರ ವಿಧಗಳಾವುವು?

2. ದೇವರಿಗೂ ಆತನ ಕಟ್ಟಳೆಗಳಿಗೂ ನಂಬಿಗಸ್ತರಾಗಿರುವುದರ ಬಗ್ಗೆ ನಮ್ಮ ಕೆಲಸಕ್ಕೆ ಇಲ್ಲವೇ ಜೀವಕ್ಕೆ ಅಪಾಯ ಒದಗಿದಾಗಲೂ ಇತರರಿಗೆ ಯಾವ ಬಗೆಯ ಸಾಕ್ಷಿಯನ್ನು ಕೊಡುತ್ತೇವೆ?

3. ದೇವರು ಪರಿಣಾಮಕಾರಿಯಾಗಿ ತನ್ನ ಉದ್ದೇಶಕ್ಕೆ ಉಪಯೋಗಿಸುವ ವ್ಯಕ್ತಿಯನ್ನಾಗಿ ಮಾಡಿದಂಥ ಏನನ್ನು ದಾನಿಯೇಲನಲ್ಲಿ ಕಾಣುವಿರಿ?

ಕರ್ತನ ಸಹಾಯದಿಂದ ಇಂತಹ ಗುಣಗಳನ್ನು ಹೆಚ್ಚಾಗಿ ಬೆಳೆಸಿಕೊಳ್ಳುವುದು ಹೇಗೆ?

4. ರಾಜನು ಆಜ್ಞಾಪಿಸಿದ ನಿಬಂಧನೆಯ ಸನ್ನಿವೇಶದಲ್ಲಿ ದಾನಿಯೇಲನು ತಾನು ಪ್ರಾರ್ಥಿಸುವ ರೀತಿಯನ್ನು ಬದಲಾಯಿಸಿಕೊಳ್ಳುವುದನ್ನು ಹೇಗೆ ಸಮರ್ಥಿಸಿಕೊಳ್ಳಬಹುದಾಗಿತ್ತು? ಹಾಗೆ ಮಾಡಿದ್ದರೆ ಅದು ಅಪಾಯಕರವಾದ ರಾಜಿಯಾಗಿರುತ್ತಿತ್ತೆ? ಏಕೆ?